UNIVERSITY OF AGRICULTURAL SCIENCES, DHARWAD

ICAR - KRISHI VIGYAN KENDRA

SAIDAPUR FARM, DHARWAD -580 005

Newsletter

Volume : 16 | Issue : 3 | July-September 2017

## Krishi Mela 2017 - Water for Agricultural Development

With the theme of **"Water for Agricultural Development"**, Krishi Mela-2017 was organized from 22-25 September, 2017. The mega event was inaugurated by Shri. Krishna Byre Gowda Hon'ble Agriculture Minister, Govt. of Karnataka. A total of 16.05 lakh people have visited various Agriculture and allied research plots and participated in the exhibition.





During this mela Shri Malleshappa Gulappa Bisirotti of Hiregunjal village, Kundagol taluk and Smt. Sunita Vinod Mandekar of Devara gudihal village, Hubballi taluka were honoured with District level Shreshta Krishika and Shreshta Krishi Mahile awards of 2017, respectively. During the Krishi Mela, Shri Manjunath Rudrappa Bagannavar, At: Mangalagatti and Smt. Manjula Prakash Sangolli, At: Garag of Dharwad taluk, Shri Rajusab Davalsab Nadaf, At: Amargol and Smt. Gangavva Parameshwar Avaradi, At: Gamanagatti of Hubballi taluk, Shri Siddaramagouda Mallikarjunagouda Patil, At: Guddada hulikatti and Smt. Kusuma Manjunath Gabburu, At: Guddada hulikatti of Kalaghatagi taluk, Shri Chetan Mallikarjun Amminabhavi, At: Shirkol and Smt. Netravati Lokapurmath, At: Tirlapur of Navalagund taluk and Shri Rajesh Dattatreya Kulkarni, At: Bharadwd and Smt. Meghana Mrutyunjay Nagashetti, At: Kalasa of Kundagol taluk were honoured with taluka level Shreshta Yuva Krishika and Shreshta Yuva Krishi Mahile awards respectively

## "New India Movement Sankalp Se Siddhi"

Krishi Vigyan Kendra, Dharwad organized "New India Movement Sankalp Se Siddhi - Determination to Attainment" (2017-2022), Seven-point strategy to double farmers' income by 2022 programme on 31.08.2017 at Harobelavadi village, Dharwad taluk. Dr.V.I.Benagi, Director of Extension, UAS, Dharwad welcomed all the dignitaries, invitees and farmers. Shri Prahlad Joshi, Hon'ble Member of Parliament inaugurated the programme and discussed about the strategies to double the income of the farmers from 2017 to 2022. Dr. D. P. Biradar, Hon'ble Vice-Chancellor, UAS, Dharwad presided the function and in his presidential remarks, he explained about the various schemes launched by Hon'ble Prime Minister for the benefit of farmers and called the farmers to utilize it in a better way. And also he made the farmers and other invitees to pledge seven point strategies. The video message of Hon'ble Prime Minister was displayed. Dr. K. Shreedhar, Principal Scientist, IGFRI, Dharwad delivered the experts' speech on technologies for doubling the farmers income. At the end of the programme an inspirational film was displayed to the farmers.

Shri Ishwarchandra Hosamani, Hon'ble Member, Board of Management, UAS, Dharwad, Smt.Seema Masuti, Ex-MLA, Shri T. Rudreshappa, Joint Director of Agriculture, Dharwad, Shri Basavaraj Kundagol, President, District Krishik Samaj, Shri Amrit Desai, Shri Davanappa Astagi, Progressive farmers and other members of Gram Panchayat and Taluk Panchayat, Department Officials, Dr. Shubha S., Senior Scientist & Head and Staff of Krishi Vigyan Kendra, Dharwad were present during the occasion. More than 300 farmers/farm women participated in the programme.







## “World Honey Bee Day” celebration

Krishi Vigyan Kendra, Directorate of Extension, University of Agricultural Sciences, Dharwad and Department of Entomology, College of Agriculture, Dharwad jointly organized training of Bee keeping on the eve of “World Honey Bee Day” celebration at KVK, Dharwad on 19.08.2017. Dr. D. P. Biradar, Hon'ble Vice Chancellor, UAS, Dharwad inaugurated the function by watering the plant. In his speech, he focused on the importance of bee keeping in integrated farming system model with a vision to enhance farmers' income. He thanked the KVK staff for organizing and celebrating this special event of World Honey Bee Day. Dr. V. I. Benagi, Director of Extension, UAS, Dharwad was the Chief Guest of the function. During the occasion, leaflet on “Profitable Apiculture” was released by the dignitaries. Dr. B. S. Nandihalli, Professor, Dept. of Agril. Entomology, College of Agriculture, Dharwad welcomed the function and gave introductory remarks on apiculture. Dr. H. N. Sattigi, Professor and Head, Dept. of Agril. Entomology, College of Agriculture, Dharwad, Dr. Shubha S., Senior Scientist and Head and Staff, KVK, Dharwad were present during the occasion.

Kumari Kalavathi K. Kambali, Scientist (Agril. Entomology), KVK, Dharwad delivered lecture on bee keeping in the Dept. of Agril. Entomology, College of Agriculture, Dharwad. During the programme, visit was arranged to Madhuvana of Horticulture Department in Alnavar hobli of Dharwad taluka. Shri Venkatesh, Honey Bee Training Assistant explained about the apiculture through demonstration. As a part of training programme honey bee products, honey bee box, honey extractor, charts of honey bee life cycle, different species of honey bees and combs were displayed during the exhibition at KVK. More than100 farmers and farm women, primary students of different schools like Government School of Narendra village, Classic Little Buds School of Dharwad and II year students of Rural Home Science, College of Agriculture, Dharwad participated in the training programme.





## Vocational paid training on “Integrated Animal Husbandry activities for Profitable Dairy Farming”

ICAR-Krishi Vigyan Kendra, Dharwad organized four days vocational paid training on **“Integrated Animal Husbandry activities for Profitable Dairy Farming”** on 12-15 September, 2017. Dr. L. Manjunath, Associate Director of Extension, UAS, Dharwad presided over the function. Dr. Vishwanath Kulkarni, Professor and Head, Department of Animal Science, College of Agriculture, Dharwad and Chief Guest of the function explained about importance of dairy, sheep and goat rearing. During the training programme various important topics like importance of dairy and dairy breeds, breed development, management of pregnant, milking animals, calf, heifer and bulls, identification of heat and artificial insemination in dairy animals, reproduction and management of repeat breeder, clean milk production, dry fodder enrichment, waste management, myths and truths in rearing of dairy animals were discussed. Low cost technologies to increase milk yield, use of azolla and hydroponic fodder as cattle feed, various diseases, management of mastitis, first aid and vaccine schedule in dairy animals, information on bank loans, animal insurance and facilities by lead bank, schemes available in NABARD and departmental schemes related for dairy farming were given by Animal Scientist of KVK, Scientists of Department of Animal Science, College of Agriculture, Dharwad, DGM, NABARD, Dharwad and various bank officers. About 53 farmers/ farm women were trained.




## Field days

"Little Millet (DHLM-36-3) Field Day"



Field day on "Little millet (DHLM-36-3)" crop was organized in Guddadahulikatti village of Kalaghatagi taluka on 06.09.2017. Dr. Shubha S., Head, KVK, Dharwad presided over the function. Shri M. V. Patil, Progressive Farmer and Chief Guest of the function said that millets have high nutraceutical value and also the cost of production is very low compared to other crops. Dr. Vinutha U. Muktamath, Scientist (Home Science), said that including millets in their daily diet keeps them away from diseases like diabetes and cancer. Shri Dawalsab Nadaf, Member, Gram Panchayat, Guddadahulikatti called the farmers to grow millets in larger area and get the profit. KVK Scientists participated as resource persons and more than 35 farmers and farm women participated in the event.

Field day on "Soybean (DSb-21)" crop was organized in Halligeri village of Dharwad taluka on 09.09.2017. Dr. Shubha S., Head, KVK, Dharwad presided over the function. Smt. Yamanavva T. Agasimani, President, Gram Panchayat, Halligeri, Smt. Gouravva S. Hiremath, President, Taluka Panchayat, Dharwad and Dr. Shaila H. M., Scientist (Ag. Entomology), AICRP (Sorghum), UAS, Dharwad were the Chief Guests of the function. Dr. Prasanna Kumar B. H., Scientist (Agronomy), KVK, explained in detail about the DSb-21 soybean variety characters, seed treatment, intercropping and nutrient management in soybean. KVK Scientists participated as resource persons and more than 40 farmers and farm women

"Soybean (DSb-21) Field Day"



## "Farmers, Bank Officers and Development Department Officers interface meeting"

Krishi Vigyan Kendra, Dharwad organized Farmers, **Bank Officers and Development Department Officers interface meeting** on 18.07.2017. Shri S. L. Vijaya Kumar, Senior Manager, Vijaya Bank (District Lead Bank) explained and interacted with farmers' about crop loan and insurance. Shri U. V. Bani, Chief Manager, Senior Manager, Karnataka Vikas Grameena Bank, Dharwad explained that crop insurance registration can be done in various national banks, co-operative banks and general service centre. Mrs. Sheela Bhandarkar, DGM, NABARD gave information about various loan and subsidy facilities related to dairy, vermicompost, milking machine, milk cooling unit, soil testing centre and also to setup the agro business by Agriculture graduates. Shri. S. K. Kannure, Agriculture Officer, Agriculture Department explained about Pradhan Mantri Fasal Bima Yojana in detail pertaining to list of crops covered under Hobli and Gram Panchayat level and fixed depreciation level for different crops, insurance amount and insurance premium to be paid by different class of farmers during kharif season. Dr. S. B. Diddimani, Deputy Director of Horticulture explained about the facilities available in Horticulture Department such as drip irrigation, farm pond, free coconut plants and providing global certification to 150 mango growers for export. Dr. Rakesh, Deputy Director, Department of Animal Husbandry explained about Pashu Bhagya Yojane, Amruta Yojane and providing fodder mini kit and other machineries like fodder chaff cutter, milking machine by the Animal Husbandry Department.

During the meeting, Officers of Agriculture and Horticulture department were explained in detail about the Pradhan Mantri Fasal Bima Yojana, guidelines about crops covered under the yojana to the farmers. The farmers discussed about their crop insurance problems with the department and bank officials. Dr. S. M. Mantur, Senior Scientist & Head and President of the function requested the farmers to avail the crop loan facilities and benefits of Pradhan Mantri Fasal Bima Yojana. More than 90 farmers and farm women of the district participated in the programme.





## Food Fest



Under the guidence of Krishi vigyan kendra, Dharwad, Self help group and Sthrishakti members prepared value added products of millets and exhibeted for sale at University of Agricultural Sciences, Dhawrad on 14.07.2017.

Further, for nutritional security and encouraging millets production, is processed little millet, foxtail millet and finger millet seeds of Krishi vigyan kendra, Dharwad and value added products like vermicilli, jawar chakkuli, roti, ragi malt products prepared from Self help group members is available for sale during the exhibition.

## Swachatha Hi Seva Abhiyan Programme

**Krishi vigyan kendra, Dharwad was organised** Swachatha Hi Seva Abhiyan Programmes like Seva divas at KVK, Dharwad on 7.09.2017 during which cleaning of office premise carried out by Staff of KVK, Dharwad, Samagra Swatcha Divas at Narendra village on 24.09.2017 in which created awareness about sanitation, Sarvatra swachatha at K C park Dharwad on 25.09.2017 during which cleaned the park premises and Swachatha of Tourist spot at someshwara Temple Dhawrad on 1.10.2017.









## Dignitaries visit to Demo plots of KVK, Dharwad

Mrs Hemaltha Vijayaraghavan, Director, Satguru Management consultant, Hyderabad visited Vermicompost unit, Azola unit and Kitchen garden of KVK, Dharwad during Dry run visit regarding IARD Programme



## Training programme for final year B.Sc (Agri) students

KVK, Dharwad organized training programme for final year B.Sc (Agri) and B.Sc (Agri and Marketing) students of UAS, Dharwad ($3^{rd}$ to $8^{th}$ July 2017 and $10^{th}$ to $15^{th}$ July 2017) and Vijayapura ($25^{th}$-$30^{th}$ September 2017) during their 3 week Rural Agricultural work experience programme.

**Editor & Publisher** : **Dr. S. Shubha**
Senior Scientist and Head
ICAR-Krishi Vigyan Kendra Dharwad

**Type Setting and Design** : **DTP Unit**
Publication Centre, UAS, Dharwad

**Associate Editors :**

**Dr. Prasanna Kumar B.H**
**Kum. Kalavathi K. Kambali**
**Dr. Vijay Kumar C.**
**Dr. Akkamahadevi D. Agasimani**
**Smt. Shailaja N Galagali**
**Mrs. Vinutha U. Muktamth**
**Dr. Jayashree Pattar**
**Dr. Praveen Goroji**

From,
**Senior Scientist and Head**
ICAR-Krishi Vigyan Kendra
Saidapur Farm, Dharwad 580 005
Karnataka, Telephone : 0836-2444272
E-mail : kvkdwd@uasd.in
Website : www.kvkdharwad.org
Facebook : Krishi Vigyan Kendra Dharwad

To,

______________________

______________________

______________________

______________________

**Book Post**

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ, ಧಾರವಾಡ -580 005
ವಾರ್ತಾ ಪತ್ರ

ಸಂಪುಟ: 16 | ಸಂಚಿಕೆ: 3 | ಜುಲೈ-ಸೆಪ್ಟೆಂಬರ್, 2017

## ಕೃಷಿ ಮೇಳ-2017, "ಜಲ ವೃದ್ಧಿ-ಕೃಷಿ ಅಭಿವೃದ್ಧಿ"

ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2017 ನೇ ಸಾಲಿನ ಕೃಷಿ ಮೇಳವನ್ನು "ಜಲ ವೃದ್ಧಿ-ಕೃಷಿ ಅಭಿವೃದ್ಧಿ" ಎಂಬ ಧ್ಯೆಯೋದ್ದೇಶದೊಂದಿಗೆ ದಿನಾಂಕ: 22 ರಿಂದ 25, ಸೆಪ್ಟೆಂಬರ್ 2017 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸರಕಾರದ ಸನ್ಮಾನ್ಯ ಕೃಷಿ ಮಂತ್ರಿಗಳಾದ ಶ್ರೀ ಕೃಷ್ಣಭೈರೇಗೌಡ ಇವರು ಕೃಷಿಮೇಳಕ್ಕೆ ಚಾಲನೆ ನೀಡಿದರು. ಈ ಮೇಳಕ್ಕೆ ಸುಮಾರು 16.05 ಲಕ್ಷ ಜನರು ಕೃಷಿ ಸಂಬಂಧಿತ ಸಂಶೋಧನಾ ತಾಕು ಹಾಗೂ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಮಾಹಿತಿ ಪಡೆದರು.






ಈ ಸಂದರ್ಭದಲ್ಲಿ ಕುಂದಗೋಳ ತಾಲೂಕಿನ ಹಿರೇಗುಂಜಾಳ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಮಲ್ಲೇಶಪ್ಪ ಗೂಳಪ್ಪ ಬಿಸಿರೊಟ್ಟಿ ಹಾಗೂ ಹುಬ್ಬಳ್ಳಿ ತಾಲೂಕಿನ ದೇವರ ಗುಡಿಹಾಳ ಗ್ರಾಮದ ಶ್ರೀಮತಿ ಸುನಿತಾ ವಿನೋದಾ ಮಾಂಡೇಕರ ಇವರುಗಳಿಗೆ ಅನುಕ್ರಮವಾಗಿ 2017 ನೇ ಸಾಲಿನ ಧಾರವಾಡ ಜಿಲ್ಲೆಯ ಶ್ರೇಷ್ಠ ಕೃಷಿಕ ಹಾಗೂ ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇದರಂತೆ ಧಾರವಾಡ ತಾಲೂಕಿನಿಂದ ಶ್ರೀ ಮಂಜುನಾಥ ರುದ್ರಪ್ಪ ಬಾಗಣ್ಣವರ, ಸಾ: ಮಂಗಳಗಟ್ಟಿ ಮತ್ತು ಶ್ರೀಮತಿ ಮಂಜುಳಾ ಪ್ರಕಾಶ ಸಂಗೊಳ್ಳಿ, ಸಾ: ಗರಗ, ಹುಬ್ಬಳ್ಳಿ ತಾಲೂಕಿನಿಂದ ಶ್ರೀ ರಾಜುಸಾಬ ದಾವಲ್‌ಸಾಬ ನದಾಫ, ಸಾ: ಅಮರಗೋಳ ಮತ್ತು ಶ್ರೀಮತಿ ಗಂಗವ್ವ ಪರಮೇಶ್ವರ ಅವರಾದಿ, ಸಾ: ಗಾಮನಗಟ್ಟಿ, ಕಲಘಟಗಿ ತಾಲೂಕಿನಿಂದ ಶ್ರೀ ಸಿದ್ದರಾಮಗೌಡ ಮಲ್ಲಿಕಾರ್ಜುನಗೌಡ ಪಾಟೀಲ, ಸಾ: ಗುಡ್ಡದಹುಲಿಕಟ್ಟಿ ಮತ್ತು ಶ್ರೀಮತಿ ಕುಸುಮಾ ಮಂಜುನಾಥ ಗಬ್ಬುರು, ಸಾ: ಗುಡ್ಡದಹುಲಿಕಟ್ಟಿ, ನವಲಗುಂದ ತಾಲೂಕಿನಿಂದ ಶ್ರೀ ಚೇತನ ಮಲ್ಲಿಕಾರ್ಜುನ ಅಮ್ಮಿನಭಾವಿ, ಸಾ: ಶಿರಕೋಳ ಮತ್ತು ಶ್ರೀಮತಿ ನೇತ್ರಾವತಿ ಲೋಕಾಪೂರಮಠ, ಸಾ: ತಿರ್ಲಾಪೂರ ಹಾಗೂ ಕುಂದಗೋಳ ತಾಲೂಕಿನಿಂದ ಶ್ರೀ ರಾಜೇಶ ದತ್ತಾತ್ರೇಯ ಕುಲಕರ್ಣಿ, ಸಾ: ಭಾರದ್ವಾಡ ಮತ್ತು ಶ್ರೀಮತಿ ಮೇಘನಾ ಮೃತ್ಯುಂಜಯ ನಾಗಶೆಟ್ಟಿ, ಸಾ: ಕಳಸ, ಇವರುಗಳಿಗೆ ಕ್ರಮವಾಗಿ ಶ್ರೇಷ್ಠ ಯುವ ಕೃಷಿಕ ಹಾಗೂ ಶ್ರೇಷ್ಠ ಯುವ ಕೃಷಿ ಮಹಿಳೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಕೃಷಿಯಲ್ಲಿ ಹೆಚ್ಚಿನ ಸಾಧನೆಗೈದ ಕುಂದಗೋಳ ತಾಲೂಕಿನ ಹಿರೇಗುಂಜಾಳ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಮಲ್ಲೇಶಪ್ಪ ಗೂಳಪ್ಪ ಬಿಸಿರೊಟ್ಟಿ ಇವರಿಗೆ ಶ್ರೇಷ್ಠರಲ್ಲಿ ಶ್ರೇಷ್ಠ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

## ನವ ಭಾರತ ಮಂಥನ – ಸಂಕಲ್ಪದಿಂದ ಸಿದ್ಧಿ

ಕೃಷಿ ವಿಜ್ಞಾನ ಕೇಂದ್ರವು **"ನವ ಭಾರತ ಮಂಥನ – ಸಂಕಲ್ಪದಿಂದ ಸಿದ್ಧಿ"** ದೃಢನಿಶ್ಚಯದಿಂದ ಸಾಕಾರದತ್ತ ನ್ಯೂ ಇಂಡಿಯಾ ಮೂವ್‌ಮೆಂಟ್ (2017–2022), 2022ರ ಒಳಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಏಳು ಅಂಶಗಳ ಕಾರ್ಯಕ್ರಮವನ್ನು ದಿ. 31.08.2017 ರಂದು ಧಾರವಾಡ ತಾಲೂಕಿನ ಹಾರೋಬೆಳವಡಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ.ವ್ಹಿ.ಆಯ್.ಬೆಣಗಿ ಇವರು ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ಹಾಗೂ ರೈತರನ್ನು ಸ್ವಾಗತಿಸಿದರು. ಸನ್ಮಾನ್ಯ ಸಂಸದರಾದ ಶ್ರೀ ಪ್ರಹ್ಲಾದ ಜೋಶಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ 2017 ರಿಂದ 2022 ರೊಳಗೆ ಭಾರತ ದೇಶದಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ಅಂಶಗಳ ಕುರಿತು ಮಾತನಾಡಿದರು. ಡಾ. ಡಿ. ಪಿ. ಬಿರಾದಾರ ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳ ವಿವಿಧ ಯೋಜನೆಗಳ ಬಗ್ಗೆ ವಿವರಿಸಿ, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಿದರು. ಅದಲ್ಲದೇ, ರೈತರ ಆದಾಯವನ್ನು ದ್ವಿಗುಣಗೊಳಿಸುವ ಏಳು ಅಂಶಗಳನ್ನು ಬೋಧಿಸಿ ಪ್ರತಿಜ್ಞೆ ಮಾಡಿಸಿದರು. ಸನ್ಮಾನ್ಯ ಪ್ರಧಾನ ಮಂತ್ರಿಗಳವರ ವಿಡಿಯೋ ಸಂದೇಶವನ್ನು ಪ್ರಸಾರ ಮಾಡಲಾಯಿತು. ಡಾ. ಕೆ. ಶ್ರೀಧರ, ಪ್ರಧಾನ ವಿಜ್ಞಾನಿಗಳು, ಭಾರತೀಯ ಹುಲ್ಲುಗಾವಲು ಮತ್ತು ಮೇವು ಸಂಶೋಧನಾ ಸಂಸ್ಥೆ, ಧಾರವಾಡ ಇವರು ರೈತರ ಆದಾಯವನ್ನು ಹೆಚ್ಚಿಸುವ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಸ್ಫೂರ್ತಿದಾಯಕ ಚಲನಚಿತ್ರ ಪ್ರದರ್ಶಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಈಶ್ವರಚಂದ್ರ ಹೊಸಮನಿ, ಧಾರವಾಡ ಕ್ಷೇತ್ರದ ಮಾಜಿ ಶಾಸಕರಾದ ಶ್ರೀಮತಿ ಸೀಮಾ ಮಸೂತಿ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಶ್ರೀ ಟಿ. ರುದ್ರೇಶಪ್ಪ, ಧಾರವಾಡ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಬಸವರಾಜ ಕುಂದಗೋಳ, ಪ್ರಗತಿಪರ ರೈತರಾದ ಶ್ರೀ ದವನಪ್ಪ ಅಷ್ಟಗಿ, ಶ್ರೀ ಅಮೃತ ದೇಸಾಯಿ, ಗ್ರಾಮ ಪಂಚಾಯತ, ತಾಲೂಕು ಪಂಚಾಯತ ಸದಸ್ಯರು, ಇಲಾಖಾ ಅಧಿಕಾರಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರ, ಧಾರವಾಡದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಶುಭಾ ಎಸ್. ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸುಮಾರು 300ಕ್ಕೂ ಹೆಚ್ಚು ಜನ ರೈತ ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಸದುಪಯೋಗ ಪಡೆದುಕೊಂಡರು.







## ವಿಶ್ವ ಜೇನುನೊಣ ದಿನಾಚರಣೆ ಅಂಗವಾಗಿ ಜೇನುನೊಣ ಸಾಕಾಣಿಕೆ ಕುರಿತು ತರಬೇತಿ

ಕೃಷಿ ವಿಜ್ಞಾನ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಾಗೂ ಕೃಷಿ ಕೀಟಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ "ವಿಶ್ವ ಜೇನುನೊಣ ದಿನಾಚರಣೆ ಅಂಗವಾಗಿ ಜೇನುನೊಣ ಸಾಕಾಣಿಕೆ" ಕುರಿತು ತರಬೇತಿಯನ್ನು ದಿ. 19.08.2017 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಗಿಡಕ್ಕೆ ನಿರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಮಗ್ರ ಕೃಷಿ ಪದ್ಧತಿಯಲ್ಲಿ ಜೇನು ಕೃಷಿಯ ಮಹತ್ವದ ಕುರಿತು ಮಾತನಾಡಿ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಈ ವಿಶೇಷ ದಿನಾಚರಣೆಯನ್ನು ಆಯೋಜಿಸಿದ ಕೇಂದ್ರದ ಸಿಬ್ಬಂದಿಗೆ ಅಭಿನಂದಿಸಿದರು. ಕೃಷಿ ವಿಶ್ವವಿದ್ಯಾಲಯ ವಿಸ್ತರಣಾ ನಿರ್ದೇಶಕರಾದ ಡಾ. ವ್ಹಿ. ಐ. ಬೆಣಗಿ ಇವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ "ಲಾಭದಾಯಕ ಜೇನು ಕೃಷಿ"ಯ ಹಸ್ತಪತ್ರಿಕೆಯನ್ನು ಗಣ್ಯರು ಬಿಡುಗಡೆಗೊಳಿಸಿದರು. ಕೃಷಿ ಮಹಾವಿದ್ಯಾಲಯದ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಬಿ. ಎಸ್. ನಂದಿಹಳ್ಳಿ ಇವರು ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ಹಾಗೂ ರೈತರಿಗೆ ಸ್ವಾಗತಿಸಿ, ಜೇನು ಕೃಷಿಯ ಕುರಿತು ಪ್ರಾಸ್ತಾವಿಕವಾಗಿ ನುಡಿದರು. ಕೃಷಿ ಮಹಾವಿದ್ಯಾಲಯದ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಹೆಚ್. ಎನ್. ಸತ್ತಿಗಿ, ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮುಖ್ಯಸ್ಥರಾದ ಡಾ. ಶುಭಾ ಎಸ್. ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರೈತರು ಕೃಷಿ ಮಹಾವಿದ್ಯಾಲಯದ ಕೀಟಶಾಸ್ತ್ರ ವಿಭಾಗಕ್ಕೆ ಭೇಟಿ ನೀಡಿ ಜೇನು ಸಾಕಾಣಿಕೆ ಕುರಿತು ಕೇಂದ್ರದ ಕೃಷಿ ಕೀಟಶಾಸ್ತ್ರದ ವಿಜ್ಞಾನಿಯಾದ ಕುಮಾರಿ ಕಲಾವತಿ ಕೆ. ಕಂಬಳಿ ಇವರಿಂದ ಸವಿಸ್ತಾರವಾದ ಮಾಹಿತಿಯನ್ನು ಪಡೆದುಕೊಂಡರು. ಇದೇ ಸಂದರ್ಭದಲ್ಲಿ ರೈತರು ಧಾರವಾಡ ತಾಲೂಕಿನ ಅಳ್ನಾವರ ಗ್ರಾಮದ ತೋಟಗಾರಿಕೆ ಇಲಾಖೆಯ ಮಧುವನಕ್ಕೆ ಭೇಟಿ ನೀಡಿ, ಜೇನುಗಾರಿಕೆ ಉದ್ಯಮದ ಕುರಿತು ಪ್ರಾತ್ಯಕ್ಷಿಕೆಯನ್ನು ಜೇನು ತರಬೇತಿ ಸಹಾಯಕರಾದ ಶ್ರೀ ವೆಂಕಟೇಶ ಇವರಿಂದ ಪಡೆದರು. ತರಬೇತಿಯ ಅಂಗವಾಗಿ ಜೇನು ಉತ್ಪನ್ನಗಳು, ಜೇನು ಪೆಟ್ಟಿಗೆ, ಜೇನುಹುಳು ಉತ್ಪಾದನಾ ಚಕ್ರ ಹಾಗು ಜೇನುತುಪ್ಪವನ್ನು ಬೇರ್ಪಡಿಸುವ ಯಂತ್ರದ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲೆಯ ವಿವಿಧ ಗ್ರಾಮದ 100ಕ್ಕೂ ಹೆಚ್ಚು ರೈತ ಹಾಗೂ ರೈತ ಮಹಿಳೆಯರು, ಗ್ರಾಮೀಣ ಗೃಹ ವಿಜ್ಞಾನದ ಮಹಾವಿದ್ಯಾಲಯದ ದ್ವಿತೀಯ ವರ್ಷದ ವಿದ್ಯಾರ್ಥಿಗಳು, ಕೃಷಿ ನರೇಂದ್ರ ಗ್ರಾಮದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಧಾರವಾಡದ ಕ್ಲಾಸಿಕ್ ಲಿಟಲ್ ಬರ್ಡ್ಸ್ ಶಾಲೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.







## ಲಾಭದಾಯಕ ಹೈನುಗಾರಿಕೆಗೆ ಸಮಗ್ರ ಪಶುಪಾಲನೆ ಪದ್ಧತಿಗಳ ಕುರಿತು ಶುಲ್ಕಭರಿತ ವೃತ್ತಿಪರ ತರಬೇತಿ

**"ಲಾಭದಾಯಕ ಹೈನುಗಾರಿಕೆಗೆ ಸಮಗ್ರ ಪಶುಪಾಲನೆ ಪದ್ಧತಿಗಳ ಕುರಿತು"** ನಾಲ್ಕು ದಿನಗಳ ಶುಲ್ಕಭರಿತ ಔದ್ಯೋಗಿಕ ತರಬೇತಿಯನ್ನು ದಿ: 12–15, ಸೆಪ್ಟೆಂಬರ್ 2017 ರವರೆಗೆ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಶ್ರೀಮತಿ ಶಿವಲೀಲಾ ವಿನಯ ಕುಲಕರ್ಣಿ ಇವರು ಗಿಡಕ್ಕೆ ನೀರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಹೈನುಗಾರಿಕೆ ಉದ್ಯಮದ ಕುರಿತು ಮಾತನಾಡಿದರು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಎಲ್. ಮಂಜುನಾಥ ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಧಾರವಾಡ ಕೃಷಿ ಮಹಾವಿದ್ಯಾಲಯದ ಪಶು ವಿಜ್ಞಾನ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ವಿಶ್ವನಾಥ ಕುಲಕರ್ಣಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಹೈನುಗಾರಿಕೆ, ಕುರಿ ಮತ್ತು ಆಡು ಸಾಕಾಣಿಕೆ ಮಹತ್ವದ ಕುರಿತು ಮಾತನಾಡಿದರು. ಕೇಂದ್ರದ ಮುಖ್ಯಸ್ಥರಾದ ಡಾ. ಶುಭಾ ಎಸ್. ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ತರಬೇತಿಯಲ್ಲಿ ಹೈನುಗಾರಿಕೆಯ ಮಹತ್ವ, ಹೈನು ತಳಿಗಳು, ತಳಿ ಅಭಿವೃದ್ಧಿ, ಗರ್ಭಧರಿಸಿದ, ಕರುಗಳ ಹಾಗೂ ಹಿಂಡುವ ರಾಸುಗಳ ಪಾಲನೆ ಮತ್ತು ಪೋಷಣೆ, ಬೆದೆಯ ಲಕ್ಷಣಗಳು, ಕೃತಕ ಗರ್ಭಧಾರಣೆ, ಸಂತಾನೋತ್ಪತ್ತಿ ಹಾಗೂ ಬರಡು ರಾಸುಗಳ ನಿರ್ವಹಣೆ, ಶುದ್ಧವಾದ ಹಾಲಿನ ಉತ್ಪಾದನೆ, ಜಾನುವಾರು ಸಾಕಾಣಿಕೆಯಲ್ಲಿ ಮೂಢನಂಬಿಕೆಗಳು ಮತ್ತು ಪ್ಲಾಸ್ಟಿಕನಿಂದಾಗುವ ಹಾವಳಿ, ಮೇವಿನ ಸಮರ್ಪಕ ಬಳಕೆ, ಪಶು ಆಹಾರವಾಗಿ ಅಜೋಲ್ಲಾ ಬಳಕೆ ಹಾಗೂ ಜಲ ಕೃಷಿ ಮೇವು, ಎರೆಹುಳು ಗೊಬ್ಬರ ಮತ್ತು ಜೈವಿಕ ಅನಿಲ ಉತ್ಪಾದನಾ ತಾಂತ್ರಿಕತೆ, ಕಡಿಮೆ ಖರ್ಚಿನಲ್ಲಿ ಹೆಚ್ಚು ಹಾಲು ಉತ್ಪಾದನೆ ಮತ್ತು ತ್ಯಾಜ್ಯ ವಸ್ತುಗಳ ನಿರ್ವಹಣೆ, ಜಾನುವಾರುಗಳಲ್ಲಿ ಸಾಂಕ್ರಾಮಿಕ ರೋಗಗಳು, ಜೈವಿಕ ಭದ್ರತೆ, ಪ್ರಥಮೋಪಚಾರ ಮತ್ತು ಕೆಚ್ಚಲು ಬಾವು ನಿರ್ವಹಣೆ, ಪಶುಪಾಲನಾ ಇಲಾಖೆ ಹಾಗೂ ನಬಾರ್ಡನಲ್ಲಿ ಹೈನುಗಾರಿಕೆಗೆ ದೊರೆಯುವ ವಿವಿಧ ಯೋಜನೆಗಳು ಮತ್ತು ಇತರೆ ಸೌಲಭ್ಯಗಳು, ಬ್ಯಾಂಕ್‌ನ ಸಾಲ ಹಾಗೂ ಸೌಲಭ್ಯಗಳು, ಜಾನುವಾರುಗಳ ವಿಮೆ ಮತ್ತು ಕುರಿತು ಕೇಂದ್ರದ ಪಶು ವಿಜ್ಞಾನಿಗಳು, ಕೃಷಿ ಮಹಾವಿದ್ಯಾಲಯದ ಪಶು ವಿಜ್ಞಾನ ವಿಭಾಗದ ಪ್ರಾಧ್ಯಾಪಕರು, ಧಾರವಾಡದ ನಬಾರ್ಡ್‌ನ ಜಿಲ್ಲಾ ವ್ಯವಸ್ಥಾಪಕರು ಹಾಗೂ ವಿವಿಧ ಬ್ಯಾಂಕ್ ಅಧಿಕಾರಿಗಳು ಉಪನ್ಯಾಸವನ್ನು ನೀಡಿದರು. ತರಬೇತಿಯಲ್ಲಿ ಸುಮಾರು 53 ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು





## ಕ್ಷೇತ್ರೋತ್ಸವಗಳು

**ಸಾವೆ ಬೆಳೆಯ ಕ್ಷೇತ್ರೋತ್ಸವ**



ಸಾವೆ (ಡಿ.ಎಚ್.ಎಲ್.ಎಮ್-36-3) ಬೆಳೆಯ ಕ್ಷೇತ್ರೋತ್ಸವವನ್ನು ದಿ.06.09.2017 ರಂದು ಕಲಘಟಗಿ ತಾಲೂಕಿನ ಗುಡ್ಡದ ಹುಲಿಕಟ್ಟಿ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಶುಭಾ ಎಸ್. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಥಿತಿಯಾಗಿ ಆಗಮಿಸಿದ ಶ್ರೀ ಎಮ್. ವಿ. ಪಾಟೀಲ್ ಅವರು **ಸಿರಿಧಾನ್ಯಗಳು ಪೌಷ್ಠಿಕತೆಯ ಆಗರವಾಗಿದ್ದು ಇದನ್ನು ಕಡಿಮೆ ಖರ್ಚಿನಲ್ಲಿ ಬೆಳೆಯಬಹುದುದಾಗಿದೆ ಎಂದು ರೈತ ಸಮುದಾಯಕ್ಕೆ ಅರಿವು ಮೂಡಿಸಿದರು.** ಕೇಂದ್ರದ **ಗೃಹ ವಿಜ್ಞಾನಿಯಾದ ಡಾ. ವಿನುತಾ ಯು. ಮುಕ್ತಾಮಠ ಅವರು ಮಾತನಾಡುತ್ತಾ** ದಿನನಿತ್ಯದ ಆಹಾರದಲ್ಲಿ ಸಿರಿಧಾನ್ಯ ಬಳಸಿದರೆ ಸಕ್ಕರೆ ಕಾಯಿಲೆ, ಕ್ಯಾನ್ಸರ್ ಹಾಗೂ ಇತರೆ ರೋಗಗಳನ್ನು ಹತೋಟಿ ಮಾಡಬಹುದು ಎಂದು ರೈತರಿಗೆ ಮನವರಿಕೆ ಮಾಡಿಕೊಟ್ಟರು, ಇನ್ನೋರ್ವ ಅಥಿಯಾಗಿ ಆಗಮಿಸಿದ ಗುಡ್ಡದ ಹುಲಿಕಟ್ಟಿ ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ದಾವಲ್ ಸಾಬ್ ನದಾಫ ರೈತರು ಸಿರಿಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆದು ಹೆಚ್ಚಿನ ಲಾಭ ಪಡೆಯಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು ಮತ್ತು ಸುಮಾರು 35 ಕ್ಕೂ ಹೆಚ್ಚು ರೈತರು /ರೈತ ಮಹಿಳೆಯರು ಕ್ಷೇತ್ರೋತ್ಸವದಲ್ಲಿ ಪಾಲ್ಗೋಂಡಿದ್ದರು.

**ಸೋಯಾಅವರೆ ಬೆಳೆಯ ಕ್ಷೇತ್ರೋತ್ಸವ**



ಸೋಯಾಅವರೆ (ಡಿ.ಎಸ್.ಬಿ.-21) ಬೆಳೆಯ ಕ್ಷೇತ್ರೋತ್ಸವವನ್ನು ದಿ.09.09.2017 ರಂದು ಧಾರವಾಡ ತಾಲೂಕಿನ ಹಳ್ಳಿಗೇರಿ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಶುಭಾ ಎಸ್. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಳ್ಳಿಗೇರಿ ಗ್ರಾಮದ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಯಮನವ್ವಾ ತಿ. ಅಗಸಿಮನಿ, ತಾಲೂಕ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಗೌರವ್ವಾ ಶಿ. ಹಿರೇಮಠ ಹಾಗೂ ಅ.ಭಾ.ಸಂ.ಸಂ.ಯೋ.(ಜೋಳ) ಕೃಷಿ ಕೀಟಶಾಸ್ತ್ರಜ್ಞರಾದ ಡಾ. ಶೈಲಾ ಎಚ್. ಎಮ್. ಮುಖ್ಯ ಅಥಿತಿಯಾಗಿ ಆಗಮಿಸಿದ್ದರು. ಕೇಂದ್ರದ **ಬೇಸಾಯ ಶಾಸ್ತ್ರಜ್ಞರಾದ ಡಾ. ಪ್ರಸನ್ನ ಕುಮಾರ ಬಿ. ಎಚ್. ಅವರು ಮಾತನಾಡುತ್ತಾ ಸೋಯಾಅವರೆಯ** ಡಿ.ಎಸ್.ಬಿ.-21 ತಳಿಯ ವಿಶೇಷತೆಗಳು, ಬೀಜೋಪಚಾರ, ಅಂತರ ಬೆಳೆ ಮತ್ತು ಪೋಷಕಾಂಶಗಳ ನಿರ್ವಹಣೆ ಕುರಿತು ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು ಮತ್ತು ಸುಮಾರು 40 ಕ್ಕೂ ಹೆಚ್ಚು ರೈತರು /ರೈತ ಮಹಿಳೆಯರು ಕ್ಷೇತ್ರೋತ್ಸವದಲ್ಲಿ ಪಾಲ್ಗೋಂಡಿದ್ದರು.

## ರೈತರು, ಬ್ಯಾಂಕ್ ಮತ್ತು ಅಭಿವೃದ್ಧಿ ಇಲಾಖಾ ಅಧಿಕಾರಿಗಳ ಮುಖಾಮುಖಿ ಸಭೆ

ಕೃಷಿ ವಿಜ್ಞಾನ ಕೇಂದ್ರದಲ್ಲಿ **"ರೈತರು, ಬ್ಯಾಂಕ್ ಮತ್ತು ಅಭಿವೃದ್ಧಿ ಇಲಾಖಾ ಅಧಿಕಾರಿಗಳ ಮುಖಾಮುಖಿ ಸಭೆ"** ಯನ್ನು ದಿ. 18.07.2017 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲೆಯ ಲೀಡ್ ಬ್ಯಾಂಕ್ ವಿಜಯಾ ಬ್ಯಾಂಕಿನ ಹಿರಿಯ ವ್ಯವಸ್ಥಾಪಕರಾದ ಶ್ರೀ ಎಸ್. ಎಲ್. ವಿಜಯಕುಮಾರ ಇವರು ಬೆಳೆ ಸಾಲ ಮತ್ತು ಬೆಳೆ ವಿಮೆ ಕುರಿತು ಸವಿಸ್ತಾರವಾದ ಮಾಹಿತಿಯನ್ನು ನೀಡಿ, ರೈತರ ಸಮಸ್ಯೆಗಳಿಗೆ ಸ್ಪಂದಿಸಿದರು. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಮುಖ್ಯ ವ್ಯವಸ್ಥಾಪಕರಾದ ಶ್ರೀ ಯು. ವಿ. ಬಾಣಿ ಇವರು ಸಹಕಾರಿ ಬ್ಯಾಂಕ್, ರಾಷ್ಟ್ರೀಯ ಬ್ಯಾಂಕ್ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆಯನ್ನು ನೋಂದಣಿ ಮಾಡಿಸಲು ಸಲಹೆ ನೀಡಿದರು. ನಬಾರ್ಡನ ಜಿಲ್ಲಾ ವ್ಯವಸ್ಥಾಪಕರಾದ ಶ್ರೀಮತಿ ಶೀಲಾ ಭಂಡಾರಕರ್ ಇವರು ನಬಾರ್ಡನ ವಿವಿಧ ಯೋಜನೆಗಳಾದ ಹೈನುಗಾರಿಕೆ, ಎರೆಹುಳು ಗೊಬ್ಬರ, ಹಾಲು ಕರೆಯುವ ಯಂತ್ರ, ಹಾಲು ಸಂಸ್ಕರಣ ಘಟಕ, ಕೃಷಿ ಪದವೀಧರರಿಗೆ ಮಣ್ಣು ಪರೀಕ್ಷಣಾ ಕೇಂದ್ರ ಮತ್ತು ಕೃಷಿ ಪರಿಕರಗಳ ಮಾರಟಕ್ಕೆ ಸಹಾಯಧನ ಹಾಗೂ ಸಾಲ ಸೌಲಭ್ಯ ನೀಡಲಾಗುವುದು ಎಂದು ತಿಳಿಸಿದರು. ಕೃಷಿ ಇಲಾಖೆಯ ಕೃಷಿ ಅಧಿಕಾರಿಯಾದ ಶ್ರೀ ಎಸ್. ಕೆ. ಕಣ್ಣೂರೆ ಇವರು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲು ವಿಮೆ ಯೋಜನೆಯಡಿ ಅಧಿಸೂಚಿತ ಹೋಬಳಿ ಮತ್ತು ಬೆಳೆಗಳ ಪಟ್ಟಿ, ಗ್ರಾಮ ಪಂಚಾಯತಿ ಮಟ್ಟಕ್ಕೆ ಒಳಗೊಂಡ ಬೆಳೆಗಳ ಪಟ್ಟಿ ಹಾಗೂ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳಿಗೆ ನಿಗಧಿಪಡಿಸಲಾಗಿರುವ ನಷ್ಟ ಪರಿಹಾರ ಮಟ್ಟ, ವಿಮಾ ಮೊತ್ತ ಹಾಗೂ ವಿವಿಧ ವರ್ಗದ ರೈತರು ಕಟ್ಟಬೇಕಾದ ವಿಮಾ ಕಂತಿನ ವಿವರ ಕುರಿತು ಮಾತನಾಡಿದರು. ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಡಾ. ಎಸ್. ಬಿ. ದಿಡ್ಡಿಮನಿ ಇವರು ತೋಟಗಾರಿಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳಾದ ಹನಿ ನೀರಾವರಿ, ಕೃಷಿ ಹೊಂಡ, 150 ಮಾವು ಬೆಳೆಗಾರರಿಗೆ ರಫ್ತು ಮಾಡಲು ಜಾಗತಿಕ ಪ್ರಮಾಣಪತ್ರ ಹಾಗೂ ಮಾವು ಮತ್ತು ತೆಂಗು ಸಸಿಗಳ ಉಚಿತ ವಿತರಣೆಯ ಬಗ್ಗೆ ಮಾಹಿತಿ ನೀಡಿದರು. ಪಶುಸಂಗೋಪನಾ ಇಲಾಖಾ ಉಪನಿರ್ದೇಶಕರಾದ ಡಾ. ರಾಕೇಶ ಇವರು ಪಶುಸಂಗೋಪನಾ ಇಲಾಖೆಯಿಂದ ದೊರೆಯುವ ಸೌಲಭ್ಯಗಳಾದ ಪಶು ಭಾಗ್ಯ ಯೋಜನೆ, ಅಮೃತ ಯೋಜನೆ, ಮೇವಿನ ಬೀಜದ ಕಿರು ಪೊಟ್ಟಣ, ವಿವಿಧ ಯಂತ್ರೋಪಕರಣಗಳಾದ ಮೇವು ಕತ್ತರಿಸುವ ಮತ್ತು ಹಾಲು ಕರೆಯುವ ಯಂತ್ರಗಳ ಕುರಿತು ರೈತರೊಂದಿಗೆ ಚರ್ಚಿಸಿದರು.





## ಆಹಾರ ಮೇಳ



ಧಾರವಾಡದ ಕೃಷಿ ವಿಜ್ಞಾನ ಕೇಂದ್ರದ ಮಾರ್ಗದರ್ಶನದಲ್ಲಿ ಸ್ವ–ಸಹಾಯ ಹಾಗೂ ಸ್ತ್ರೀಶಕ್ತಿ ಗುಂಪಿನ ಸದಸ್ಯರುಗಳು ತಯಾರಿಸಿದ ಸಿರಿಧಾನ್ಯಗಳ ಮೌಲ್ಯವರ್ಧಿತ ಪದಾರ್ಥಗಳ ವಸ್ತು ಪ್ರದರ್ಶನ ಹಾಗೂ ಮಾರಾಟವನ್ನು ಕೃಷಿ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿ. 14.07.2017 ರಂದು ಏರ್ಪಡಿಸಲಾಗಿತ್ತು. ಪೌಷ್ಟಿಕ ಭದ್ರತೆಗಾಗಿ ಸಿರಿಧಾನ್ಯಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೃಷಿ ವಿಜ್ಞಾನ ಕೇಂದ್ರದಿಂದ ಸಂಸ್ಕರಿಸಿ ಪ್ಯಾಕ್ ಮಾಡಿದ ಸಾವೆಅಕ್ಕಿ, ನವಣೆಅಕ್ಕಿ, ರಾಗಿ, ರಾಗಿಹಿಟ್ಟು, ಸ್ವ–ಸಹಾಯ ಗುಂಪಿನ ಸದಸ್ಯರು ನವಣೆಯಿಂದ ತಯಾರಿಸಿದ ಚಕ್ಕುಲಿ, ಉಂಡೆ, ನಿಪ್ಪಟ್ಟು, ಶ್ಯಾವಿಗೆ, ಖಾಖ್ರಾ; ಜೋಳದಿಂದ ತಯಾರಿಸಿದ ಅವಲಕ್ಕಿ, ಚಕ್ಕುಲಿ, ರೊಟ್ಟಿ; ರಾಗಿಯಿಂದ ತಯಾರಿಸಿದ ಸಂಡಿಗೆ, ಮಾಲ್ಟ್, ಶ್ಯಾವಿಗೆ, ಚಕ್ಕುಲಿ; ಹಾಗೂ ಸಾವೆ ಶ್ಯಾವಿಗೆ ಪದಾರ್ಥಗಳು ಗ್ರಾಹಕರಿಗಾಗಿ ಮಾರಾಟಕ್ಕೆ ಲಭ್ಯವಿದ್ದವು.

## ಸ್ವಚ್ಛ ಭಾರತ ಅಭಿಯಾನ ಅಂಗವಾಗಿ "ಸ್ವಚ್ಛತಾ ಹಿ ಸೇವಾ" ಕಾರ್ಯಕ್ರಮಗಳು

ಕೃಷಿ ವಿಜ್ಞಾನ ಕೇಂದ್ರವು ಸ್ವಚ್ಛ ಭಾರತ ಅಭಿಯಾನ ಅಂಗವಾಗಿ "ಸ್ವಚ್ಛತಾ ಹಿ ಸೇವಾ" ಕಾರ್ಯಕ್ರಮಗಳನ್ನು ವಿವಿಧ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ದಿನಾಂಕ 07.09.2017 ಸೇವಾ ದಿವಸ ಅಂಗವಾಗಿ ಕೃ.ವಿ.ಕೇ., ಧಾರವಾಡ ಕಛೇರಿ ಆವರಣವನ್ನು ಸ್ವಚ್ಛಗೊಳಿಸಲಾಯಿತು, ದಿನಾಂಕ 24.09.2017 ರಂದು ಸಮಗ್ರ ಸ್ವಚ್ಛತಾ ದಿವಸವನ್ನು ನರೇಂದ್ರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ದಿನಾಂಕ 25.09.2017 ರಂದು ಸರ್ವತ್ರ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ಧಾರವಾಡದ ಕಿತ್ತೂರು ಚೆನ್ನಮ್ಮ ಉದ್ಯಾನವನವನ್ನು ಸ್ವಚ್ಛಗೊಳಿಸಲಾಯಿತು. ದಿನಾಂಕ 01.10.2017 ರಂದು ಪ್ರವಾಸಿ ಸ್ಥಳದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಧಾರವಾಡದ ಸೋಮೇಶ್ವರ ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಲಾಯಿತು.










## ಕೃಷಿ ವಿಜ್ಞಾನ ಕೇಂದ್ರದ ವಿವಿಧ ಘಟಕಗಳಿಗೆ ಗಣ್ಯರ ಭೇಟಿ

ಶ್ರೀಮತಿ ಹೇಮಲತಾ ವಿಜಯರಾಘವನ್, ನಿರ್ದೇಶಕರು, ಸದ್ಗುರು ವ್ಯವಸ್ಥಾಪಕ ಸಲಹೆಗಾರರು, ಹೈದರಾಬಾದ ಇವರು ಐ.ಎ.ಆರ್.ಡಿ. ಕಾರ್ಯಕ್ರಮದ ನಿಮಿತ್ತ ಕೃಷಿ ವಿಜ್ಞಾನ ಕೇಂದ್ರ, ಧಾರವಾಡದ ಎರೆಹುಳು ಘಟಕ, ಅಜೋಲ್ಲಾ ಘಟಕ ಮತ್ತು ಕೈತೋಟಗಳಿಗೆ ಭೇಟಿ ನೀಡಿದರು.



## ಅಂತಿಮ ವರ್ಷದ ಬಿ.ಎಸ್‌ಸಿ. ವಿದ್ಯಾರ್ಥಿಗಳಿಗೆ ತರಬೇತಿ

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಧಾರವಾಡ(3 ರಿಂದ 8 ಜುಲೈ 2017 ಮತ್ತು 10 ರಿಂದ 15 ಜುಲೈ 2017) ಮತ್ತು ವಿಜಯಪುರ (25–30 ಸೆಪ್ಟೆಂಬರ್ 2017) ಕೃಷಿ ಮಹಾವಿದ್ಯಾಲಯಗಳ ಅಂತಿಮ ವರ್ಷದ ಬಿ.ಎಸ್‌ಸಿ. (ಕೃಷಿ) ಹಾಗೂ ಬಿ.ಎಸ್‌ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ) – ಗ್ರಾಮೀಣ ಕೃಷಿ ಅನುಭವ ಕಲಿಕೆ ಅವಧಿಯ ವಿದ್ಯಾರ್ಥಿಗಳಿಗೆ ಕೃಷಿ ವಿಜ್ಞಾನ ಕೇಂದ್ರದ ಕಾರ್ಯ ಚಟುವಟಿಕೆಗಳ ಅಧ್ಯಯನಕ್ಕೆ ಒಂದು ವಾರದ 3 ತರಬೇತಿಗಳನ್ನು ಆಯೋಜಿಸಲಾಗಿತ್ತು.


ಸಂಪಾದಕರು ಹಾಗೂ ಪ್ರಕಾಶಕರು : ಡಾ. ಶುಭಾ ಎಸ್.
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಅಕ್ಷರ ಜೋಡಣೆ ಮತ್ತು ವಿನ್ಯಾಸ : ಡಿಟಿಪಿ, ಘಟಕ
ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ

ಸಹ ಸಂಪಾದಕರು

ಡಾ. ಪ್ರಸನ್ನ ಕುಮಾರ ಬಿ.ಎಚ್.
ಡಾ. ವಿನುತಾ ಯು.ಮುಕ್ತಾಮಠ
ಡಾ. ವಿಜಯಕುಮಾರ ಪಿ.
ಡಾ. ಅಕ್ಕಮಹಾದೇವಿ ಡಿ. ಅಗಸಿಮನಿ
ಶ್ರೀಮತಿ ಶೈಲಜಾ ಎನ್. ಗಲಗಲಿ
ಕು. ಕಲಾವತಿ ಕೆ. ಕಂಬಳಿ
ಡಾ. ಜಯಶ್ರೀ ಪತ್ತಾರ
ಡಾ. ಪ್ರವೀಣ ಗೊರೊಜಿ



ಇಂದ,
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ್, ಧಾರವಾಡ 580 005
ಕರ್ನಾಟಕ, ದೂರವಾಣಿ : 0836–2444272
ಮಿಂಚಂಚೆ : kvkdwd@uasd.in
ವೆಬ್‌ಸೈಟ್ : www.kvkdharwad.org
ಫೇಸ್‌ಬುಕ್ : Krishi Vigyan Kendra Dharwad


ಗೆ,

ತೆರೆದ ಅಂಚೆ